Regd No M 1299 34 th Year ತಾ|| 31—7—51

SATYAVADI

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಆಹಾರ ಆಜ್ಞೋಲ್ಲಂಘನ

ಅನಧಿಕೃತ ಹೋಟೆಲು ನಡೆಸಿದ ತಪ್ಪಿಗಾಗಿ ಓರ್ವನಿಗೆ ಕೋರ್ಟು ಏಳುವವರಿಗೆ ಸಾದಾ ಸಜ ಮತ್ತು ರೂ 60 ದಂಡ ವಿಧಿಸಲಾಯಿತು. ದಂಡ ಕೊಡದಿದ್ದಲ್ಲಿ 15 ದಿವಸ ಸಾದಾ ಸಜ ವಿಧಿಸಲಾಯಿತು.

ಪರ್ಮಿಟ್ ಇಲ್ಲದೆ ಭತ್ತ ಸಾಗಿಸಿದ್ದಕ್ಕೆ 5 ಮಂದಿಗೆ ಕೋರ್ಟು ಏಳುವವರಿಗೆ ಸಾದಾ ಸಜ ರೂ. 30 ರಿಂದ 40 ರವೆಗೆ ದಂಡ ವಿಧಿಸಲಾಯಿತು. ದಂಡ ಕೊಡದಿದ್ದರೆ 15 ದಿವಸ ಸಾದಾ ಸಜ ವಿಧಿಸಲಾಯಿತು.

ಪರ್ಮಿಟ್ ಇಲ್ಲದೆ ಅಕ್ಕಿ ಸಾಗಿಸಿದ್ದಕ್ಕೆ ಈರ್ವರಿಗೆ ಕೋರ್ಟು ಏಳುವವರಿಗೆ ಸಾದಾ ಸಜ ಕ್ರಮವಾಗಿ ರೂ. 30 ಮತ್ತು 40 ದಂಡ ವಿಧಿಸಲಾಯಿತು. ದಂಡ ಕೊಡದಿದ್ದರೆ ಹದಿನೈದು ದಿವಸ ಸಾದಾ ಸಜ ವಿಧಿಸಲಾಯಿತು.

ರೇಷನ್ ಕಾರ್ಡುದಾರರಿಗೆ ಸಾಕಷ್ಟು ಸಕ್ಕರೆ ಕೊಡಲು ದಾಸ್ತಾನು ಮಾಡದಿದುದರಿಂದ 1 ವಿಭಾಗದ ಲೈಸನ್ಸುದಾರ್ ಓರ್ವರಿಗೆ ರೂ 10 ದಂಡ ವಿಧಿಸಲಾಯಿತು.

ಮೂರನೇ ವಿಭಾಗದ ಲೈಸನ್ಸುದಾರರೋವರಿಂದ ಇಳುವರಿಗಾಗಿ ಬೆಲೆಯನ್ನು ವಸೂಲ್ಮಾಡಲಾಯಿತು ಮತ್ತು ಹೆಚ್ಚು ದಾಸ್ತಾನು ಇದ್ದುದನ್ನು ಪ್ರಾರಂಭದ ಉಳಿಕೆಗೆ ಸೇರಿಸಲಾಯಿತು.

ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ 8 ಆಹಾರ ಆಜ್ಞೋಲ್ಲಂಘನೆಗಳು ಜರುಗಿವೆ.

— ಸರ್ಕಾರಿ ಪ್ರಕಟಣೆಯಿಂದ

× ಬ್ರಿಟನ್ನಿನಲ್ಲಿ ದಿನಕ್ಕೆ ಸರಾಸರಿ 15 ಲಕ್ಷ ಮಂದಿ ಮುಖಕ್ಷೌರ ಮಾಡಿಕೊಳ್ಳುತ್ತಾರೆ. ಎಂದರೆ ಸುಮಾರು ನೂರು ಎಕರೆ ಜಮೀನಿನಷ್ಟು 60 ಮೈಲು ಗಳಷ್ಟು ಬ್ಲೇರು ಕಟಾವು ಮಾಡಿದಂತಾಯಿತು.

ದಿವ್ಯವಾಣಿ

ನಮಗಿರುವುದು ಎರಡು ಕಿವಿಗಳು ಒಂದು ಬಾಯಿ. ಅದ್ದರಿಂದ ನಾವು ಹೆಚ್ಚು ಕೇಳಿ, ಕಡಿಮೆ ಮಾತನಾಡಬೇಕು.

— ಚಿಂಗ್ ಚೌ.

ದಂಡ ವಿಧಿಸಲಾಯಿತು

ಮೈಸೂರು ನಗರ ನ್ಯಾಯಾಧಿಕಾರಿ ಕಾಂತಿ, ಸಿದ್ಧಿ ಪಾರ್ವತಿ ಕಾಮಿ ಇವರಿಗೆ ತಲಾ ರೂ. 3 ದಂಡ ವಿಧಿಸಿದರು. ಮೊನ್ನೆ ರಾತ್ರಿ ಕುಂಬಾರಗೇರಿಯಲ್ಲಿ ವ್ಯಭಿಚಾರವನ್ನು ಪ್ರೇರೇಪಣೆ ಮಾಡಿದರೆಂಬುದು ಇವರ ಮೇಲಿನ ಆಪಾದನೆ.

ಪೌರಸಭೆ

ಡಾ|| ಬಿ. ಜಿ. ದಾಸ್‌ರವರು ಮೈಸೂರು ನಗರದಲ್ಲಿ ಅಮಶಂಕೆ, ಅತಿಸಾರ ವ್ಯಾಧಿ ನಿವಾರಣೆಯಾಗದಿರುವ ಕುರಿತು ಸೊಳ್ಳೆಗಳ ನಾಶಕ್ಕಾಗಿ ತೀವ್ರ ಕ್ರಮ ಕೈಗೊಳ್ಳಬೇಕೆಂದು ಶ್ರೀ ಟಿ. ನರಸಿಂಹಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಿನ್ನೆ ಸಮಾವೇಶಗೊಂಡಿದ್ದ ಮೈಸೂರು ಪೌರಸಭೆಯ ಸಾಧಾರಣ ಅಧಿವೇಶನದಲ್ಲಿ ತಿಳಿಸಿದರು.

ಮಾಜಿ ಸದಸ್ಯ ಶ್ರೀ ಶ್ರೀನಿವಾಸ ಶೆಟ್ಟರವರ ನಿಧನಕ್ಕೆ ಸಂತಾಪ ಸೂಚಿಸುವ ನಿರ್ಣಯವನ್ನು ಶ್ರೀ ಎಳಲಹಳ್ಳಿ ಸೀತಾರಾಮಯ್ಯನವರು ಮಂಡಿಸಿದ್ದು ಅಂಗೀಕೃತವಾಗಿ ಸಭೆ ಸ್ವಲ್ಪ ನಿಮಿಷ ನಿಂತು ಮೌನ ಆಚರಿಸಿತು.

ವಿದೇಶ ಪ್ರವಾಸ

ಮೈಸೂರಿನ ಸುಪ್ರಸಿದ್ಧ ವರ್ತಕರಾದ ಶ್ರೀ ಕೆ ಆಂಜನಪ್ಪನವರು. ಪತ್ನಿ ಸಮೇತ ವಿದೇಶ ಪ್ರವಾಸ ಕೈಗೊಳ್ಳುವರೆಂದು ಗೊತ್ತಾಗಿದೆ.

— ಗೂಢಚಾರರೆಂಬ ಅನುಮಾನದಿಂದ ಸಿಂಧಿನಲ್ಲಿ 2 ಹಿಂದುಗಳು ಬಂಧಿತರಾದರು

ಯಾವ ಪರತ್ತೂ ಇಲ್ಲದೆ ದೆಹಲಿಗೆ ಬನ್ನಿ ಎಂದು ಲಿಯಾಕತ್‌ಗೆ ಕರೆ

ಯಾವ ಪರತ್ತೂ ಇಲ್ಲದೆ ತಮಗೆ ಅನುಕೂಲವಾದಾಗ ದೆಹಲಿಗೆ ಬಂದು ನಮಗೆ ಸಂಬಂಧಪಟ್ಟ ವಿಷಯ ಚರ್ಚಿಸಬಹುದು ಎಂದು ಪಾಕಿಸ್ತಾನ ಪ್ರಧಾನಿ ಲಿಯಾಕತ್ ಅಲಿಗೆ ಪಂ|| ನೆಹರು ಆಮಂತ್ರಣವಿತ್ತಿದ್ದಾರೆ ಮಿಷ್ಟಿಯುಸ್ತ ತೋರಿದ ಮೇಲೆ ನವ್ಯ ಗಡಿಯುಸ್ತ ಅರಕ್ಷಿತ ಬಿಡುವದು ಸಾಧ್ಯವೇ ಎಂದು ಪಂ|| ನೆಹರು ಕೇಳಿದ್ದಾರೆ

—

— ಸಚಿವ ಪದವಿಗೆ ಕಿದ್ವಾಯಿ ತಕ್ಷಣ ರಾಜೀನಾಮೆ ಕೊಡೊ ಸುದ್ದಿ ಇದೆ

ಭಾರತಕ್ಕೆ ಹೋಗಲು ತಿಳಿಸಿದ್ದು ತಪ್ಪು !

ಭವಿಷ್ಯ ಹೇಳಿಕೆ

ಸೆಪ್ಟಂಬರ್ 3 ನೇ ವಾರದಲ್ಲಿ ಮೈಸೂರು ಶಾಸನ ಸಭೆ ಸಮಾವೇಶವಾಗಬಹುದೆಂದು ಸಚಿವ ಶ್ರೀ ಕೆ. ಟಿ. ಭಾಷ್ಯಂ ಬೆಂಗಳೂರಿನಲ್ಲಿ ಪತ್ರಿಕೆಯವರಿಗೆ ತಿಳಿಸಿದ್ದಾರೆ

ಮಹಾರಾಜನಾವಣೆ ಮುಂದಿನ ವರ್ಷ ಜನವರಿ ಮಧ್ಯ ಭಾಗದಲ್ಲಿ ಜರುಗುವದೆಂದು ಬೆಂಗಳೂರಿನಲ್ಲಿ ಶ್ರೀ ಕೆ ಟಿ ಭಾಷ್ಯಂ ಪತ್ರಿಕೆಯವರಿಗೆ ತಿಳಿಸಿದ್ದಾರೆ

ಮುಂದಿನ ಮಾಹೆ ಮಧ್ಯ ಭಾಗದಲ್ಲಿ ಸಂಸ್ಥಾನದ ಸರ್ವ ರಾಜಕೀಯ ಪಕ್ಷದ ಸಭೆ ಸೇರಿಸಿ ಚುನಾವಣೆ ಗುರುತುಗಳನ್ನು ನಿಗದಿ ಮಾಡಲಾಗವದೆಂದು ಸಚಿವ ಶ್ರೀ ಕೆ ಟಿ ಭಾಷ್ಯಂ ಬೆಂಗಳೂರಿನಲ್ಲಿ ಪತ್ರಿಕೆಯವರಿಗೆ ತಿಳಿಸಿದ್ದಾರೆ

ದೇಶದಲ್ಲಿ ಕ್ರಾಂತಿ ಸಂಭವಿಸಿ ಸರ್ಕಾರ ಉರುಳುವ ಸಂಭವ !

ಕಿಸಾನ್ ಮಜದೂರ್ ಪ್ರಜಾಪಕ್ಷದ ಮುಂದಾಳು ಆಚಾರ್ಯ ಕೃಪಲಾನಿಯವರು ಹೊನ್ನೆ ರಾಜಕೋಟೆಯಲ್ಲಿ ಭಾಷಣ ಮಾಡುತ್ತಾ ಇಂತೆಂದರು

ದೇಶದಲ್ಲಿ ಕಳ್ಳಪೇಟೆಯ ಹಾವಳಿ ತುಂಬಾ ಇದೆ ಬಡವರು ಮತ್ತು ಮಧ್ಯಮ ವರ್ಗದವರ ಜೀವನ ಸ್ಥಿತಿ ಬಹಳ ಕಷ್ಟತಮವಾಗಿದೆ. ಬ್ರಿಟೀಷರ ಆಡಳಿತ ಕಾಲಕ್ಕಿಂತ ಸ್ವಾತಂತ್ರ್ಯದ ಬೆಲೆ ಏರುವದೇ ಇದಕ್ಕೆ ಕಾರಣ ಪರಿಸ್ಥಿತಿ ಹೀಗಿರುವಾಗ ರಾಷ್ಟ್ರದಲ್ಲಿ ಕ್ರಾಂತಿ ಎದ್ದು ರಾಜ್ಯ ಉರುಳಿಬೀಳುವ ಸಂಭವವಿದೆ.

ಭೇಟಿ ಮಾಡಿಸಲು ಪ್ರಯತ್ನ

ಕಾಶ್ಮೀರ ಮಧ್ಯಸ್ಥಿಕೆಗಾರ ಡಾ|| ಗ್ರಹಾಂ ನೆಹರು—ಅಮೂಕತ್‌ಅಲಿ ಇವರ ಸಂದರ್ಶನ ಏರ್ಪಡಿಸಲು ಪ್ರಯತ್ನ ಮಾಡುತ್ತಿರುವದಾಗಿ ಗೊತ್ತಾಗಿದೆ

× ಭಾರತದಲ್ಲಿ ಸುಮಾರು 128 ಎಕರೆಗಳಷ್ಟು ಜಮೀನು ಎಂದರೆ ಶೇಕಡಾ 19—2 ರಷ್ಟು ನೆಲ ಕಾಡುಗಳಿಂದ ತುಂಬಿಕೊಂಡಿದೆ.

‡ ರಾಜಕೀಯ ದೃಷ್ಟಿಯಿಂದ ಕಾಶ್ಮೀರೀಯ ಮಜದೂರ ಸಂಘ ಕಾಂಗ್ರೆಸಿಗೆ ಸಹಕಾರವೀಯುವದು.

ಯಾವ ಪರತ್ತೂ ಇಲ್ಲದೆ ದೆಹಲಿಗೆ ಬನ್ನಿ ಎಂದು ಲಿಯಾಕತ್‌ಗೆ ಕರೆ

99 ವರ್ಷ ಶಿಕ್ಷೆಯಾದವ.

ಜೊಸ್‌ಅಂಡ್ರೂರೈಟ್ ಎಂಬ ನಿಗ್ರೊವಿಗೆ (39 ವರ್ಷ) 13 ವರ್ಷದ ನಿಗ್ರೊ ಬಾಲಿಕೆ ಮೇಲೆ ಅತ್ಯಾಚಾರ ಮಾಡಿದನೆಂದು ವಿಚಾರಣೆಗೆ ಗುರಿಮಾಡಲಾಗಿದೆ. 31 ರಲ್ಲಿ ಶ್ವೇತ ಬಾಲಕಿಯರ ಮೇಲೆ ಅತ್ಯಾಚಾರ ಮಾಡಿದ್ದರಿಂದ ಆಗ 99 ವರ್ಷ ಶಿಕ್ಷೆ ವಿಧಿಸಿ 15 ತಿಂಗಳ ಹಿಂದೆ ಪೆರೋಲ ಬಿಡಲಾಗಿತ್ತೆಂದು ನ್ಯೂಯಾರ್ಕ್ ವಾರ್ತೆ ತಿಳಿಸುತ್ತದೆ. ತಾನು ನಿರಪರಾಧಿಯೆಂದು ಅವನ ಹೇಳಿಕೆ.

ಭಾರತಕ್ಕೆ ಹೋಗಲು ತಿಳಿಸಿದ್ದು ತಪ್ಪು !

ಸರ್ದಾರ್ ಇಬ್ರಾಹಿಂ ಖಾನ್ ಕಾಶ್ಮೀರ ಭಾರತಕ್ಕೆ ಸೇರಬೇಕೆಂದು ಪ್ರತಿವಾದನೆ ಮಾಡಿದ್ದೇ ಆಜಾದ್ ಕಾಶ್ಮೀರ ಸರ್ಕಾರದ ಮುಂದಾಳುತನದಿಂದ ಹೊರಹಾಕಲು ಕಾರಣವಾಯಿತೆಂದು ಶ್ರೀನಗರ ವರದಿ ಈ ವಿಷಯವನ್ನು ಶ್ರೀನಗರದಲ್ಲಿ ಬಾಗದಾದಿನ ಅಸ್‌ಸಲಾಂ ಪತ್ರಿಕೆ ಒಡೆಯರಾದ ಡಾ| ಅಬ್ದುಲ್ ವಹಾಬ್ ತಿಳಿಸಿದ್ದಾರೆ

ಪೈರು ನಾಶವಾಯಿತು

ಪ್ರವಾಹದ ಪರಿಣಾಮವಾಗಿ ಎಲ್ಲೂರು ತಾಲ್ಲೂಕಿನ ಹತ್ತು ಗ್ರಾಮಗಳಲ್ಲಿ ನಾಟಿ ಭತ್ತದ ಪೈರಿನ ಸಹಸ್ರಾರು ಎಕರೆ ಗದ್ದೆ ನೀರಿನಲ್ಲಿ ಮುಳುಗಿ ಪೈರು ನಾಶವಾಗಿದೆ

ಭೂಮಾತೆ, ಗೋಮಾತೆ, ಗಂಗಾಮಾತೆ

ತಾಯಿಗಿಂತ ಬೇರೆ ದೈವವಿಲ್ಲವೆಂದು ಶಾಸ್ತ್ರಗಳು ಘೋಷಿಸುತ್ತವೆ. ಮಕ್ಕಳನ್ನು ರಕ್ಷಿಸಲು ಮಾತೃದೇವತೆಯು ಸರ್ವಸ್ವವನ್ನೂ ಧಾರೆ ಎರೆಯು ತ್ತಾಳೆ ಅವಸರ ಬಂದಲ್ಲಿ ಪ್ರಾಣವನ್ನೂ ಕೂಡ ತ್ಯಜಿಸಿಬಿಡುವಳು.

ಭಾರತೀಯರು ಭೂ, ಗೋ, ಗಂಗೆಗಳನ್ನು ಮಾತೆಯಾಗಿ ಪರಿಗಣಿಸು ತ್ತಾರೆ. ಯುಗಯುಗಾಂತರಗಳಿಂದ ಹಿಂದುಗಳು ಗಂಗಾನದಿಯನ್ನು ಪೂಜಿಸು ತ್ತಿದ್ದಾರೆ. ಗಂಗಾಜಲಕ್ಕಿಂತ ಪವಿತ್ರವಾದದ್ದು ನಮ್ಮ ದೇಶದಲ್ಲಿಯೇ ಅಲ್ಲ ಪ್ರಪಂಚದಲ್ಲಿಯೇ ಇಲ್ಲವೆಂಬುದು ಅವರ ಭಾವನೆ.

ಕೃತುಗಳಿಗೂ, ಯಜ್ಞಗಳಿಗೂ, ಸರ್ವ ಕರ್ಮಗಳಿಗೂ ಗಂಗೆಯ ನೀರು ಅವಶ್ಯಕವು. ಗಂಗಾ ಸ್ನಾನದ ಫಲವು ಅನಂತವಾದುದೆಂದು ಗಂಗಾಯಾತ್ರೆ ಮಾಡಿ ಬರುತ್ತಾರೆ. ಗಂಗಾ ದರ್ಶನವೇ ಮುಕ್ತಿಪ್ರದವಾದುದೆಂದು ಅವರ ನಂಬಿಕೆ.

ಗಂಗೆಯು ಸರ್ವ ರೋಗ ನಿವಾರಣೀ ಸಂಜೀವನಿ ಎಂದೂ ನಂಬುವರು. ಇದು ಮೂಢವಿಶ್ವಾಸವೆಂದು ಕೆಲವರು ನಿರಾಕರಿಸುವರು ; ನೋಡಿ.

" ಏನೇ ಅಕ್ಬರ " ಎಂಬ ಮಹಮ್ಮದೀಯ ಗ್ರಂಥದಲ್ಲಿ ಗಂಗೆಯನ್ನು ಕುರಿತು ವಿಷಯಗಳು ತಿಳಿಸಿದೆ—

೧ ಗಂಗೆಯಲ್ಲಿ ಸ್ನಾನ ಮಾಡಿದರೂ, ಗಂಗಾಜಲವನ್ನು ಪಾನಮಾಡಿ ದರೂ ಸಂಪೂರ್ಣಾರೋಗ್ಯವು ಲಭಿಸುತ್ತದೆ.

೨ ಎಷ್ಟು ಕಾಲದವರಿಗಿಟ್ಟರೂ ಅದು ಕೆಡುವದಿಲ್ಲ.

೩ ಈ ಕಾರಣದಿಂದಲೇ ಗಂಗೆಯನ್ನು ಮನೆಗಳಿಗೆ ತೆಗೆದುಕೊಂಡು ಹೋಗಿ ಅಮೌಲ್ಯ ವಸ್ತುವಾಗಿ ಬಳಸುತ್ತಾರೆ.

ಔರಂಗಜೇಬ ಚಕ್ರವರ್ತಿಯ ವೈದ್ಯರಲ್ಲಿ ಮುಖ್ಯನಾದವನು ' ಮನೌಚಿ '. ಅತನು ವೆನಿಸ್‌ನಗರ ವಾಸಿಯು. ಅತನು ಹೀಗೆ ಹೇಳಿದ್ದಾನೆ. " ಹಿಂದೂ ಗಳು ಗಂಗೆಯನ್ನು ಪೂಜಿಸುತ್ತಾರೆ. ಗಂಗಾಜಲವು ಸರ್ವ ಪಾಪ ಹಾರಿಯು "

ತನ್ನ ಸಾಮ್ರಾಜ್ಯದಲ್ಲಿ ಮಣಿ ಸದೃಶವಾದದ್ದು ಗಂಗಾ ನದಿಯೆಂದು ಅಕ್ಬರು ಚಕ್ರವರ್ತಿ ಹೇಳುತ್ತಿದ್ದನು ಮಹಮ್ಮದೀಯ ಚಕ್ರವರ್ತಿಗಳು ಗಂಗಾ ಜಲದ ವಿನಹ ಅನ್ಯ ಜಲವನ್ನು ಪಾನಮಾಡುತ್ತಿರಲಿಲ್ಲವೆಂದು. ' ಟೆವರ್ನಿಯರ್ " ಎಂಬ ಪಾಶ್ಚಾತ್ಯ ಪರಿಶೋಧಕನು ಹೇಳಿದ್ದಾನೆ. ಗಂಗಾ ಜಲವನ್ನು ದಿನ ಪ್ರತಿ ಹೊತ್ತುಕೊಂಡು ಬರಲು ಕೆಲವು ಒಂಟೆಗಳನ್ನು ಅವರು ಏರ್ಪಾಡು ಮಾಡಿ ದ್ದರು. ಗಂಗಾ ನದಿಯಲ್ಲಿ ತಪಗಳು ದಿನಾಪ್ರತಿ ಹೊಡೆದುಕೊಂಡು ಹೋಗುತ್ತಿ ದ್ದರೂ, ಜಲವು, ಕ್ರಿಮಿಗಳಿಲ್ಲದೆ ಪರಿಶುಭ್ರವಾಗಿರುವದೆಂದಲೇ ಗಂಗೆಯನ್ನು ಎಲ್ಲಾ ಕುಲಗಳವರೂ, ಮತಗಳವರೂ ಪೂಜಿಸುವಿಕೆಯೆಂದ ಅತನು ಹೇಳಿರುವನು.

[ಮುಂದುವರಿದುದು



' ಗೋರಕ್ಷಣೆ "

ಕಾರ್ಯ ಎಲ್ಲೆಲ್ಲೂ ನಡೆಯಲಿ

ಉಡ್‌ಲ್ಯಾಂಡ್

ಶಿ ನ

— 4 ನೇ ವಾರ —

ದುಲ್‌ಖುಷ್ ಪಂಚೋಲಿಯವರ

ನ ಗೀ ನಾ

— ಪಾತ್ರ —

ನೂತನ್, ನಾಸಿರ್ ಖಾನ್, ಗೋಪ್

ರಣಜಿತ್

ಅಮೋಘ 4 ನೇ ವಾರ

ದೀದಾರ್

3—8—51 ರಿಂದ

ಪ್ರೀತ್ ಕ ಗೀತ್

ಪ್ರತಿದಿನ 3 ಆಟಗಳು

= OPERA =

July 31 st

Elizebeth Ladymead

(Technicolor)

Starring — Anna Neagle

— Next —

Pygmy Island

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಸತ್ಯವಾದಿ ಸೋಮವಾರ ಸಂಚಿಕೆ

ಶ್ರೀ ದ್ವಾರಕಾ ಜಗದ್ಗುರುಗಳವರ

ಉದಾರಾಶ್ರಯದಲ್ಲಿ ಪ್ರಕಟವಾಗುವ

- ಪ್ರಬೋಧ -

ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ

ವಾರ್ಷಿಕ ಚಂದಾ

ಅಂಚೆವೆಚ್ಚ ಸಮೇತ 1—14—0



ಪೂರಾಕ್ಷರಗಳಲ್ಲಿ ವಿಶ್ವಸಂಸ್ಥೆ ಸೇನೆ ಹುತಾತ್ಮರಿಗೆ ಗೌರವ

Edited, Printed and Published by M. S. Krishna Rao, at the Satyavadi Press Chamrajpuram Mysore